ವಾರದ ಸಂಚಿಕೆ

Reg No. M 1299
Daily & Weekly

SATYAVADI Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 307] ಶನಿವಾರ 22—5—1943 [6 ಪೈ

This Space is available for Advt.

Opera — Aryamala

ಅಪೆರಾ——

ಆರ್ಯಮಾಲಾ !
ಆರ್ಯಮಾಲಾ !
ಆರ್ಯಮಾಲಾ !

ಪಿ. ಯು. ಚಿನ್ನಪ್ಪ ಸಂತಾನಲಕ್ಷ್ಮಿ
ಶಕುಂತಲ, ಕೃಷ್ಣ, ಮಧುರಾ
ಮುಂತಾದವರು ಪಾತ್ರವಹಿಸಿರುವರು

ಈ ವಾರದ ಭವಿಷ್ಯ

ಕೃಷ್ಣಾಪುರ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

ಮೇಷ

ಯತ್ನ ಕಾರ್ಯಗಳು ಸಿದ್ಧಿಸುವುವು. ಬಂಧು-ಮಿತ್ರರ ನೆರವು ಚೆನ್ನಾಗಿರುವುದು. ಖರ್ಚು ಹೆಚ್ಚಾಗಿರುವುದು.

ವೃಷಭ

ಸಾರಪತ್ನಿಕ ಸ್ಥಿತಿಯು ಉತ್ತಮ ಗೊಳ್ಳುವುದು. ಕೆಲಸಕಾರ್ಯಗಳಲ್ಲಿ ಅನುಕೂಲವಿದೆ.

ಮಿಥುನ

ಯಶಸ್ಸು ಕೀರ್ತಿಗಾಗಿ ಸಾಹಸ ಪಡುವಿರಿ ಹಣದ ಕೊರತೆಯೇನೂ ಇಲ್ಲ.

ಕರ್ಕಾಟಕ

ಚಂಚಲತೆ ಹೆಚ್ಚಾಗಿದೆ. ಈ ವಾರದಲ್ಲಿ ನಿಮ್ಮ ಸ್ಥಿತಿಗತಿ ಉತ್ತಮಗೊಳಿಸುವುದು.

ಸಿಂಹ

ಅಂತಹ ಉತ್ತಮ ಫಲವೇನೂ ಇಲ್ಲ ಮಿಶ್ರ ಫಲ ನಡೆಯುವುದು.

ಕನ್ಯಾ

ಕಳೆದ ವಾರಕ್ಕಿಂತಲೂ ನಿಮಗೆ ಅನುಕೂಲಗಳು ಹೆಚ್ಚಾಗುವುವು.

ತುಲಾ

ಜನರಲ್ಲಿ ಮಾನ ಸನ್ಮಾನ ಲಭಿಸುವುದು. ಹಣಕಾಸಿನ ಪರಿಸ್ಥಿತಿ ಉತ್ತಮಗೊಳ್ಳುವುದು.

ವೃಶ್ಚಿಕ

ಮಿಶ್ರಫಲ ನಡೆಯುವುದು. ಬಂಧು ಬಳಗದವರ ದರ್ಶನ ದೊರೆಯುವುದು

ಧನು

ಹಳೇ ಬಾಕಿ ವಸೂಲಾಗುವುದು. ಜನರಲ್ಲಿ ಮನಸ್ತಾಪಕ್ಕೆ ಅವಕಾಶವಿದೆ.

ಮಕರ

ಚಟುವಟಿಕೆಯಿಂದ ಕೆಲಸ ಮಾಡುವಿರಿ ಕಂಟಕಷ್ಟರಲ್ಲಿ ಗೌರವ ಹೆಚ್ಚಾಗಿದೆ.

ಕುಂಭ

ದೈವಭಕ್ತಿ ಹೆಚ್ಚಾಗಿದೆ. ತಾಪತ್ರಯಗಳು ಅವರಿಸಿದೆ.

ಮೀನ

ಸ್ವಲ್ಪ ಚಿಲ್ಲರೆ ಗೋಳುಗಳು ಇದ್ದೇ ಇದೆ. ಮುಂದೆ ಅನುಕೂಲವಿದೆ.

ವಾರ್ತಾತರಂಗ ವಿವಿಧ ವರ್ತಮಾನ

ಇಂಗ್ಲೆಂಡಿನಲ್ಲಿ ಮಿ|| ಚರ್ಚಿಲ್ಲರ ಭಾಷಣ ಕೇಳಿ ಬ್ರಿಟಿಷರೂ ಜಪಾನ್ ಮೇಲೆ ಪ್ರಬಲ ಯುದ್ಧ ನಡೆಸುವರೆಂದು ಹರ್ಷಚಿತ್ತರಾಗಿರುತ್ತಾರೆ.

ಮಿ|| ಚರ್ಚಿಲರು ಇಂಗ್ಲೆಂಡಿನ ವಹಾವ್ಯಕ್ಕೆ ಎಂದೂ ಕಷ್ಟಕಾಲದಲ್ಲೂ ಉತ್ಸಾಹವನ್ನೇ ತೋರ್ಪಡಿಸುತ್ತಾ ಹರ್ಷಚಿತ್ತದಿಂದ ಕೆಲಸಮಾಡುತ್ತಿರುವರೆಂದು ಮಿ|| ಈಡನ್‌ರವರು ಕನ್ಸರ್‌ವೇಟಿವ್ ಪಕ್ಷದ ಸಭೆಯಲ್ಲಿ ಹೇಳಿದರು.

ಇಂಡಿಯಾದಿಂದ ನಿನ್ನೆ ದಿವಸ ವಿಮಾನಗಳು 3 ದಳವಾಗಿ ಹೊರಟು ಬರ್ಮಾ ಮೇಲೆ ಧಾಳಿ ಮಾಡಿದವು.

ಇನ್ನು ಮುಂದೆ ಅಮೇರಿಕಾದಲ್ಲಿ ವರ್ಷಕ್ಕೆ 3 ಜೊತೆ ಜೋಡನ್ನು ಮಾತ್ರ ಉಪಯೋಗಿಸತಕ್ಕದೆಂದು ಸರ್ಕಾರಿ ಆಜ್ಞೆಯಾಗಿದೆ.

ಹಿಂದೆ ಯಾರೂ ಕೇಳದ 70 ಸಾವಿರ ಮಿಲಿಯನ್ ಡಾಲರನ್ನು ಕೊಡುವಂತೆ ಕಾಂಗ್ರೆಸ್ಸಿಗೆ ಮಿ || ರೂಸ್ವೆಲ್ಟರು ಕೇಳುವರಾಗಿರುವರು. ಇದನ್ನು ಯುದ್ಧ ಖರ್ಚಿಗೆ ಉಪಯೋಗಿಸುವರು.

ನಿನ್ನೆ ರಾತ್ರಿ ಬರ್ಲಿನ್ನಿನ ಮೇಲೆ ಬ್ರಿಟಿಷರು ಧಾಳಿ ಮಾಡಿದರು. ಸಮುದ್ರದಲ್ಲಿ ಕೆಲವು ಗುಂಡನ್ನು ಹಾರಿಸಿದರು. ಉತ್ತರ ಫ್ರಾನ್ಸ್‌ನಲ್ಲಿ ಬ್ರಿಟಿಷ್ ಧಾಳಿಯಾಯಿತು.

ಜಪಾನಿ ನೌಕ ಮುಖ್ಯಸ್ಥನಾದ ಅಡ್ಮಿರಲ್ ಇಸೊರೊಕು ಯಾಮಾಮೊಟೊ ಶಾಂತಿ ಸಾಗರದ ಯುದ್ಧದಲ್ಲಿ ಮಡಿದನೆಂದು ತಿಳಿಯಬರುತ್ತೆ. ಇವನ ಮರಣದಿಂದ ಜಪಾನಿಯರಿಗೆ ತುಂಬ ನಷ್ಟವೆಂದು ಹೇಳಬಹುದು. ಈತನು ಆಟದಲ್ಲಿ ಯಾವಾಗಲೂ ಗೆಲ್ಲುತ್ತಿದ್ದರಿಂದ "ಅದೃಷ್ಟ ಇಸೊರೊಕು" ಎಂದು ಕರೆಯುತ್ತಿದ್ದರಂತೆ.

ಯೂರೋಪಿನಲ್ಲಿ ಎರಡನೆ ರಣಕ್ಷೇತ್ರ ಬೇಗನೆ ಆರಂಭವಾಗುವುದೆಂದು ರಷ್ಯನರು ತಿಳಿದುಕೊಂಡಿರುವರು.

ಉತ್ತರ ಆಫ್ರಿಕಾಕ್ಕೆ ಭಾರತೀಯರಿಂದ ಸಾಮಗ್ರಿಗಳ, ಒಟ್ಟೆ, ರೈಲ್ವೆ ಟ್ರಂಕ್, ವ್ಯಾಗನ್, ಔಷಧಿ, ವಿಮಾನ ಲಂಗರು, ಉಕ್ಕು ರಸ್ತೆಯನ್ನು ಸರಿಪಡಿಸಿದವರು ಭಾರತ ಇಂಜನಿಯರುಗಳು ಮತ್ತು ಸತ್ಯಪರ್ಸ್ ವೈನರ್ಸ್‌ರವರು. ಅಮೇರಿಕಾದಿಂದ ಬರುತ್ತಿದ್ದ ಉಕ್ಕು ನೀರಿನ ಪಾಲಾಗುತ್ತಿದ್ದಾಗ ಭಾರತದ ಉಕ್ಕೆ ರಷ್ಯಾಕ್ಕೆ ಸಾಗುತ್ತಿತ್ತು.

ನಿನ್ನೆ ರಾಬೂಲಿನ ಮೇಲೆ 18 ಟನ್ ಬಾಂಬನ್ನು ಮಿತ್ರ ವಿಮಾನ ಸುರಿಮಳೆ ಮಾಡಿತು.

ಏಷ್ಯಾವನ್ನು ಪೂರ್ತಾ ಜಪಾನರು ತಮ್ಮ ಆಡಳಿತದಲ್ಲಿಟ್ಟುಕೊಳ್ಳಬೇಕೆಂದು ಈ ತಿಂಗಳು 15 ರಲ್ಲಿ ಜಪಾನಿನ ಸರಕಾರವು ನೋಟಿಫಿಕೇಷನ್ ಹೇಳಿರುವರು.

ಮುಂದಿನ ವೈಸರಾಯಿ ಪಟ್ಟ ಲಾಡ ಕ್ಲಾರ್ಕ್‌ಗೆ ಬೇರಿಗೆಂದು ಈಚಿನ ಸುದ್ದಿ.

ಅಮೇರಿಕಾದ ಮಿಸ್ಸೂರೀ ನದಿಯು ಉಕ್ಕಿ 30 ಸಾವಿರ ಜನರಿಗೆ ಮನೆಯಿಲ್ಲದಂತೆ ಮಾಡಿದೆ. ಸೇನೆಗಳೂ ವಿಮಾನಗಳೂ ಕಷ್ಟಪಟ್ಟು ಸಹಾಯ ಮಾಡುತ್ತಿವೆ.

ವರ್ಜೀನಿಯ ರೂಹ್ರ್ ಪ್ರದೇಶದ 2 ಅಣೆಕಟ್ಟನ್ನು ಒಡೆದು ನಾಶಮಾಡಿದ ವಿಮಾನೆ ಪಡೆಯ ಮುಖ್ಯಸ್ಥರಾದ್ದ ಸರ್ ಆರ್ಥರ್ ಹ್ಯಾರಿಸ್‌ರವರನ್ನು ಅಭಿನಂದಿಸಿದರು.

ಈಗ ಜಪಾನರು ಪೆಸಿಫಿಕ್ಕಿನಲ್ಲಿ ಮಿತ್ರಪಕ್ಷದ ವಿಮಾನಕ್ಕಿಂತ ಎರಡರಷ್ಟು ವಿಮಾನಗಳನ್ನು ಇಟ್ಟಿರುವುದಾಗಿ ಅಮೇರಿಕಾದವರು ಹೇಳುವರು.

ವಾಷಿಂಗ್ಟನ್ನಿನಲ್ಲಿ ಪೆಸಿಫಿಕ್ ಯುದ್ಧದ ಸಿದ್ಧತೆ ವಿಷಯದಲ್ಲಿ ಆಲೋಚನೆ ನಡೆಯುತ್ತಲೇ ಇದೆ. ಪ್ರತಿದಿವಸವೂ ಮಿ || ಚರ್ಚಿಲ್, ರೂಸ್ವೆಲ್ಟ್, ಚೈನಾದ ಸೌಂಗ್ ಎಲ್ಲರೂ ಕಲೆತು ಮಾತನಾಡುತ್ತಲೇ ಇರುವರು.

ಶ್ರೀ "ಓಂ" ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಷೇಪಕರವಾದ ಪದಾರ್ಥವೂ ಸೇರಿಲ್ಲ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ಸ್ವಯಂಕೃತಾಪರಾಧ

1 ನೇ ಅಧ್ಯಾಯ

ನಾರಾಯಣಮೂರ್ತಿ—ಅಮ್ಮ ಕಛೇರಿಗೆ ಹೊತ್ತಾಗಲಿಲ್ಲವೆ?

ಸುಬ್ಬಮ್ಮ—ಮಗು ಸಳಲಾರರದ ಮುದುಕಿ, ಖುಷಿ ಪಂಚವಿ ಎಉದ್ಯಾವಸೆ ಯಾಗಿ 10 ವರ್ಷಗಳಾಯಿತು ರಾತ್ರಿಯೆಲ್ಲಾ ಜ್ವರ, ಕೆಮ್ಮು ಬೀಗ ಏಳುವುದಕ್ಕೆ ತ್ರಾಣವಿಲ್ಲ. ಏನು ಮಾಡಲಪ್ಪ; ಈ ಮಾತಿಗೆ ಯಾವ ಉತ್ತರವನ್ನೂ ಹೇಳದೆ ಏನೇನೋ ಯೋಚಿಸಿಕೊಳ್ಳುತ್ತಾ ನಿಂತಿರುವ ಮೂರ್ತಿಯನ್ನು ನೋಡಿ ಮಗು ನೀನು ಅಣಿಯಾಗಿ ಸಂಸಾರ ಮಾಡಿಕೊಂಡಿರುತ್ತೀಯೆ ನೋಡಿ ಸಂತೋಷಪಡಬೇಕು ಎಂಬ ಆಶೆಯ ಬಹಳವಾಗಿತ್ತು. ಈ ನಿರ್ಭಾಗ್ಯಳ ಹಣೆಯಲ್ಲಿ ಅಷ್ಟು ಪುಣ್ಯವೂ ಬರದಿದೆಯೆ ಹೇಳಿ ಫಲವೇನು;

ಕಾಲವಾಯಿತು, ದೇಶವಾಯಿತು. ಇವತ್ತೋ ನಾಳೆಯೋ, ಇರುವ ಒಬ್ಬ ಮಗನಿಗೆ ಸಂಸಾರ-ಅಣಿಯಿಲ್ಲದೆ ಹೋಯಿತಲ್ಲಾ ಎಂಬ ವ್ಯಸನವೇ, ವ್ಯಸನ ಮಾಡುವುದೇನು?

(ಈ ಮಾತುಗಳನ್ನು ಕೇಳಿದ ಮೂರ್ತಿಯು ಹತ ಪ್ರಭನಾಗಿ ಹೊರಗೆ ಬಂದು ಪಡಸಾಲೆಯಲ್ಲಿ ಕುಳಿತು)

ನಾರಾಯಣಮೂರ್ತಿ—ತಾಯಿಯವರಿಗೆ 82 ವರ್ಷ ಈ ಮುಪ್ಪಿನಲ್ಲಿ ಅವರನ್ನು ಕಷ್ಟಪಡಿಸುವೆನಲ್ಲ! ಹಳ್ಳಿಗಾಡಿನ ಹೆಣ್ಣು ದೊಡ್ಡಸ್ಥಿಕೆಗೆ ತಕ್ಕನಳಲ್ಲ ವೆಂಬ ಅಭಿಪ್ರಾಯದ ಮೇಲೆ ಹೆಂಡತಿಯನ್ನು ತೌರುಮನೆಗೆ ಕಳುಹಿಸಿ 6 ವರ್ಷ ಗಳ ಮೇಲಾಯಿತು, ಈಗ ನಾನೇ ಹೋಗಿ ಕರತರುವುದು ಶುದ್ಧವ್ಯಂಗ,

ನಾನು ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ್ಯೆ ದೊಡ್ಡಸ್ಥಿಕೆ ಯುಂಟಾಗುವುದೆಂಬ ಭ್ರಾಂತಿನಿಂದ ಸ್ಪೆಕ್ಟಕಲ್ ಹಾಕಿಕೊಳ್ಳುವುದನ್ನು ಅಭ್ಯಾಸ ಮಾಡಿದ್ದಾಯಿತು. ಇದು ಮಿಣಿಮಿಣಿಗುಟ್ಟತ್ತಾ ಮುಖಾನಂದವನ್ನು ಎಷ್ಟೋ ಸೆಚ್ಚಿಸುತ್ತಲಿತ್ತು. ಆದರಿಂದ ಹಗಲಿರಳೂ ಧಾರಣೆ ಮಾಡಿಕೊಂಡಿದ್ದೆ, ಕೆಲವು ದಿವಸಗಳ ಮೇಲೆ ಕನ್ನಡಕವನ್ನು ತೆಗೆದು ನೋಡಿದರೆ ಯಾವ ಪದಾರ್ಥವೂ ಕಾಣದ ಹಾಗಾಯಿತು. ಈಚೆಗಂತೂ ಕನ್ನಡಕವಿದ್ದರೂ ರಾತ್ರಿ ದೀಪದ ಬೆಳಕಿನಲ್ಲಿ ಕಣ್ಣು ಕಾಣುವುದೇ ಇಲ್ಲ. ಇದಕ್ಕಾಗಿ ಸಂಜೆಗೆ ಮುಂಜೆಯೇ ಚಿಕ್ಕ ಮನೆಯನ್ನು ಸೇರಿ ಇವನು ಕುರುಡನೆಂಬ ಭಾವವು ಯಾರಿಗೂ ಗೋಚರವಾಗದ ರೀತಿಯಲ್ಲಿ ಎಷ್ಟೋ ಉಪಾಯವಾಗಿ ಕಾಲಕ್ಷೇಪವನ್ನು ಮಾಡುತ್ತಲಿದ್ದೇನೆ. ಹಾಗೆ ಗೊತ್ತಾಗುವದರಿಂದ ಕಛೇರಿ ಕೆಲಸಕ್ಕೆ ಬಾಧೆಯಂಟು.

ಈಗ ಹೆಂಡತಿಯನ್ನು ಕರೆತಂದೇ ಬೇಕಾಗಿದೆ, ಕರೆತಂದ ಮೇಲೆ ಸನ್ನ ಕುರುಡುತನವು ಅವಳಿಗೆ ಗೊತ್ತಾಗದಿರುವುದಿಲ್ಲ. ಎಷ್ಟೇ ಗೋಪ್ಯವಾಗಿದ್ದೇ ಕೆಂದು ತಾಕೀತು ಮಾಡಿದರೆ ಕೆಲವು ದಿನಗಳ ಮೇಲಾದರೂ ಈ ವಿಷಯವು ಹರಡಿ ಕೊಳ್ಳದಿರುವುದಿಲ್ಲ. ಕಛೇರಿಗೆ ಗೊತ್ತಾದ ಮೇಲೆ ಸನ್ನ ನೌಕರಿ ಸಿಲ್ಲುವುದುಂಟೇ.

ಕರೆತಂದೇನೆ ಈ ಬಾಧೆ ಕರೆತರದಿದ್ದರೆ ನಿರ್ವಾಹವಿಲ್ಲ ಏನು ಮಾಡಲಿ. ತಂದೆಯವರಿದ್ದ ಕಾಲದಲ್ಲಿ ಮನೆಯಲ್ಲಿ ನಿತ್ಯವೂ ಹತ್ತೆಂಟು ಮಂದಿಗೆ ಭೋಜನ ನಡೆಯುತ್ತಲಿತ್ತು ದೇವರ ಪೂಜೆಯವರೂ, ಪಾರಾಯಣದವರೂ, ಯಾಜಕನೆಯ ಬ್ರಾಹ್ಮಣರೂ, ಅತಿಥಿ ಅಭ್ಯಾಗತರೂ. ಚಿಕ್ಕಪ್ಪನವರಿಗೆ, ದೊಡ್ಡಪ್ಪನ ಮಗ ಭಾವ ಮೈದ, ಭಾವಮೈದುನ ಭಾವ ಎಂದು ಮುಂತಾಗಿ ಹೇಳಿಕೊಳ್ಳುತ್ತಿದ್ದ ನೆಂಟರೂ ಮೇಲೆ ಮೇಲೆ ಒಂದು ನೆರೆಯುತ್ತಲೇ ಇದ್ದರು. ಮನೆಯ ಮುಂದೆ ಸರಸ್ಥದ ಗಾಡಿಗಳು ನಿಲ್ಲದಿರುವ ದಿನವೇ ಇರಲಿಲ್ಲ.

ಮನೆಯಲ್ಲಿ ಎಲ್ಲಿ ನೋಡಿದರೂ ದವಸವೇ ತುಂಬಿತ್ತು. ಈಗ ದವಸವೂ ಇಲ್ಲ, ಜನರ ಸುದ್ದಿಯೂ ಇಲ್ಲ. ಈ ತಾಪತ್ರಯಕ್ಕೆ ಕೊನೆ ಮೊದಲೇ ಇಲ್ಲ. ಇರುವ ಒಬ್ಬ ಮುದುಕಿಗೆ ಅನ್ನ ಹಾಕುವುದೇ ಪರಮ ಪ್ರಯಾಸ. ಹಣ ವಿದ್ಯಾಭ್ಯಾಸಕ್ಕಾಗಿ ಪೂರ್ವಿಕರು ಸಂಪಾದಿಸಿಟ್ಟಿದ್ದ ಸ್ವತ್ತನ್ನೆಲ್ಲಾ ಅಡಮಾನಿ ಮನೆಯಲ್ಲೇನಾದರೂ ಅಸಂದರ್ಭ ಸಂಭವಿಸಿದ ಪಕ್ಷದಲ್ಲಿ 150-200 ರೂಪಾಯಿಗಳಾದರೂ ಖರ್ಚಿಗೆ ಬೇಕು. ಅಡಮಾನವಿಡುವುದಕ್ಕೆ ಒಡವೆಯಾದರೂ ಇದೆಯೆ! ಒಂದು ಒಡವೆಯೂ ಇಲ್ಲ. ಈಗ ಕರತರುವುದರಲ್ಲಿ ಪ್ರಯಾಣದ ಖರ್ಚಿಗೆ 15 ರೂಪಾಯಿಗಳಾದರೂ ಬೇಕೇಬೇಕು.

ಜಪಾನ್ ಜೀರೋ ತಪ್ಪಿಸಿಕೊಂಡ ರೀತಿ

ಜನರಲ್ ಜೀರೋ ಹೇಗೆ ಜರ್ಮನಿಯಿಂದ ತಪ್ಪಿಸಿಕೊಂಡು ಬಂದನೆಂಬುದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡುವುದಿಲ್ಲವೇ? ಜೀರೋ ಮೇಲೆ ಸರ್ಕಾರಕ್ಕೆ ಕಾವಲು! ನಾಜೀ ಜೈಲು! ಇಂಥಾದ್ದರಲ್ಲಿ ಜೀರೋ ತಪ್ಪಿಸಿಕೊಂಡು ಬಳಲು ಬ್ರಿಟಿಷ್ ಮಂತ್ರಿ ಮಿ|| ಚರ್ಚಿಲ್ಲರವರ ಬುದ್ಧಿ ಕೌಶಲ್ಯತೆಯು ವ್ಯಕ್ತವಾಗುವುದು, ಬ್ರಿಟಿಷ್ ಮಂತ್ರಿಗಳ ಕೈವಾಡವಿಲ್ಲದೆ ಜೀರೋರವರು ಬರಲು ಆಗುತ್ತಲೇ ಇರಲಿಲ್ಲ. ಇಂಗ್ಲೆಂಡಿನ ಪ್ರಸಿದ್ಧ ಪೋಲೀಸ್ ದಳದ ಕ್ಯಾಪ್ಟನ್ ಲಿಸ್ಟರ್ ಎನ್ನುವರು ಪ್ರಧಾನ ಮಂತ್ರಿಗಳು ಜೀರೋರವರನ್ನು ಕರೆದುಕೊಂಡು ಬರಲು ಈ ಮಹಾ ಪುರುಷನಿಗೆ ಹೇಳಿದರು ಈ ಜೀರೋ ಬಂದರೆ ತಮ್ಮ ಕಾರ್ಯ ಸುಲಭವಾಗಿ ಆಗುವುದೆಂಬುದು ನಮ್ಮ ಮಂತ್ರಿಯವರಿಗೆ ಗೊತ್ತು, ಇವತ್ತಿನೇ ನಮ್ಮ ಚಕ್ರವರ್ತಿಗಳು ಮಿ|| ಚರ್ಚಿಲ್‌ರವರ ಕೈವಾಡದಿಂದ ಟುನಿಷಿಯಾ ಗೆದ್ದದ್ದು ಎಂದು ಹೇಳಿದರು ಈ ಲಿಸ್ಟರ್ ಸೆಂಟ್ ನಾಜರಿಯಲ್ಲಿಗೆ ಒಂದು ಫ್ರೆಂಚ್ ಕೂಲಿಗಾರನೆಂದುಕೊಂಡು ಜರ್ಮನಿಗೆ ಕೆಲಸಕ್ಕೆ ಹೋದನು. ಇವನಿಗೆ ಜೈಲಿನಲ್ಲಿ ಬಾಗಿಲುಕಾಯುವ ಕೆಲಸ ಸಿಕ್ಕಿತು. ಇವನಿಂದಲೆ ಜೀರೋ ತಪ್ಪಿಸಿಕೊಂಡು ಮಾರ್ಸೇಲಸ್‌ಗೆ ಬಂದನಂತರ ಉತ್ತರ ಆಫ್ರಿಕಾಕ್ಕೆ ಬಂದ ವಿಷಯ ಎಲ್ಲರಿಗೂ ತಿಳಿದಿದೆ

ಇದು ನಿಮಗೆ ಗೊತ್ತೇ?

ಯುದ್ಧಕ್ಕೆ ಮುಂಚೆ ಇಂಡಿಯಾದಲ್ಲಿ ೬೦೦ ವರ್ಕ್‌ಷಾಪುಗಳು ಇದ್ದುವಂತೆ. ಈಗ ೧,೫೦೦ ಎಂಜಿನೀಯರಿಂಗ ವರ್ಕ್‌ಷಾಪುಗಳು ಇವೆ. ಇವುಗಳ ಪೈಕಿ ಲಳಂ ಎಲ್ಲಾ ಎಂಜನಿಯರಿಂಗ್ ಸಲಕರಣೆಗಳ ತಯಾರಿಕೆಯಲ್ಲಿ ತೊಡಗಿವೆ ೩೬೮ ರೈಲ್ವೇ ಮತ್ತು ಇತರ ವರ್ಕ್‌ಷಾಪುಗಳು ಇತರ ಯುದ್ಧ ಗುಂಡುಗಳ ತಯಾರಿಕೆಯಲ್ಲಿ ತೊಡಗಿವೆ. ಇವುಗಳಲ್ಲದೆ ಸಣ್ಣಪುಟ್ಟ ಕೈಗಾರಿಕೋದ್ಯಮ ದಲ್ಲಿ ತೊಡಗಿರುವ ಒಂಡವಾಳಸ್ಥರು ಅನೇಕ ಸಾಮಾನುಗಳ ತಯಾರಿಕೆಯಲ್ಲಿ ಕಂಟ್ರಾಕ್ಟು ವಹಿಸಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಇಂಡಿಯಾ ದೇಶವು ಯುದ್ಧಕ್ಕೆ ಬೇಕಾಗಿರುವ ಸಾಮಗ್ರಿಗಳಲ್ಲಿ ಶೇಕಡಾ ೯೦ ರಷ್ಟನ್ನು ಈಗ ತಯಾರ್ಮಾಡುತ್ತಿದೆ.

ಭಾರತ ದೇಶದಲ್ಲಿರುವ ಅನೇಕ ಗ್ರಾಮವಾಸಿಗಳು ೪೩ ಲಕ್ಷ ರೂಪಾಯಿಗಳ ಬೆಲೆ ಬಾಳುವಷ್ಟು ಸೈನಿಕರು ಹಾಕಿಕೊಳ್ಳುವ ಒಂದು ನಮೂನೆಯ ಹ್ಯಾಟು ಗಳನ್ನು ಒದಗಿಸಿದ್ದಾರೆ.

೧೯೪೨ ನೇ ವರ್ಷಾಂತ್ಯದಲ್ಲಿ ಭಾರತೀಯ ಯುದ್ಧಪೈದಿಗಳಿಗೆ ಇಂಡಿಯನ್ ರೆಡ್‌ಕ್ರಾಸಿನವರು ೧೫೫,೦೦೦ ಗಳಿಗೆ ಮೇಲ್ಪಟ್ಟು ಆಹಾರ ಪದಾರ್ಥಗಳ ವಾರ್ಸಲುಗಳನ್ನು ಸರಬರಾಜು ಮಾಡಿದ್ದಾರೆ

ಟ್ಯೂನಿಷಿಯಾದಲ್ಲಿ ಇಟಲಿಯನ್ ಬಂಧನದಿಂದ ವಿಮುಕ್ತರಾಗಿರುವ ಪ್ರಜೆ ಗಳಿಗೆ ಮಿತ್ರ ಸಹಾಯ ಸಮಿತಿಗಳು ಆಹಾರ ಸಾಮಗ್ರಿಗಳನ್ನು ಹಾಜರಾರಂಭಿ ಸಿದೆ. ಆಹಾರ ಒಟ್ಟೆಗಳು ಅಗತ್ಯವಾದವರಿಗೆಲ್ಲಾ ಅವನ್ನು ಕೊಡಲಾಗುತ್ತಿದೆ ಯೆಂದು ಸಹಾಯ ಮತ್ತು ಪುನರ್ವ್ಯವಸ್ಥೆಯು ಜನೆರಲ್ ಡೈರೆಕ್ಟರು ವಾಷಿಂ ಗ್ಟನ್ನಿನಲ್ಲಿ ತಿಳಿಸಿದ್ದಾರೆ. (ರಾ)

ಆದರೆ ಮನೆಯಲ್ಲಿ ಸ್ವತ್ತೇ ಇಲ್ಲವೇ; ಎಲ್ಲಿ ನೋಡಿದರೂ ಗಿಲ್ಟ್ ಅಕ್ಷರ ಗಳನ್ನು ಮಿಣಿಗುಟ್ಟಿಸುತ್ತಿರುವ ಪುಸ್ತಕಗಳು ಎಷ್ಟಿಲ್ಲವೆಂದರೂ ಮೂರು ಸಾವಿರ ರೂಪಾಯಿ ಬೆಲೆಗೆ ಕಮ್ಮಿ ಇಲ್ಲ. ಆದರೆ ಈ ಹಳ್ಳಿಗಾಡಿನಲ್ಲಿ ಅವುಗಳನ್ನು ಕೇಳುವವರಾರು. ಭಾರತವಲ್ಲ ರಾಮಾಯಣವಲ್ಲ ಆ ಪುಸ್ತಕಗಳು ಹೂಣ ಭಾಷೆಯವು. ಕೋಳೀಕಥೆ, ನಾಯಿಕಥೆ, ಆಚ್ಚೀಕಥೆ ಕಿತ್ತಾಟಗಳ ಕಥೆ ಒದ್ದಾಟದಕಥೆ, ಮುಂತಾದ ನಾಮೆಲ್ಲುಗಳು. ಕೆಲವು ಗಾಜಿನ ಸಾಮಾನುಗಳೂ ಭಾವಚಿತ್ರಗಳೂ ಉಂಟು. ಇವುಗಳ ವ್ಯಾಪಾರದಿಂದ ಖರ್ಚಿಗಾಗದ ಬೆಲೆಯಾದರೂ ಒಂದೇ ಬರುತ್ತದೆ. ಇವು ಗಳನ್ನು ಮಾರುವುದು ಗೌರವಕರ. (ಮುಂದೆವರಿಯುವದು)

ಎಲ್ಲೆಲ್ಲಿ ಫನೇನು ?

ಹೈದರಾಬಾದಿನ ಕೋರ್ಟುಗಳಲ್ಲಿ ಲಂಚ ತೆಗೆದು ಕೊಳ್ಳುವುದು ಕಮ್ಮಿಯಾಯಿತೆಂದು ಸರ್ಕಾರದವರೇ ಹೇಳುವರು.

ಇಟಲಿಯ ರಾಜನಾದ ವಿಕ್ಟರ್ ಎಮ್ಮುಯಲ್ ರಾಜಪರಿತ್ಯಾಗ ಮಾಡುವ ರೆಂದು ಬಲವಾದ ಸಮಾಚಾರವಿದೆ.

ಈಚೆಗೆ ತುರ್ಕಿಯಿಂದ ಬಂದ ಇಟಲಿಯವರು ಯುದ್ಧದ ಸಂಗತಿಯನ್ನೆಲ್ಲಾ ಮುಂಚಟ್ಟು ಮಾಡಿಕೊಂಡರು. ಅಲ್ಲದೆ ಈಚೆಗೆ ಇಟಲಿಯ ಮೇಲಿನ ಮಿತ್ರಪಕ್ಷದ ಧಾಳಿಯನ್ನು ನೋಡಿ, ಯಾವಗಲಿಗೆ ಏನಾಗುತ್ತೋ ಎಂದು ಹೆದರುತ್ತಿರುವಂತೆ.

ಮುಸೋಲಿನಿಯು ಹಿಟ್ಲರಿಗೆ ಆಂಟಿ ಏರ್‌ಕ್ರಾಫ್ಟ್ ಗನ್, ಆರ್ಟಿಲರಿಗನ್ ವಿಮಾನಗಳನ್ನು ಇಟಲಿಯನ್ನು ಕಾಪಾಡಲು ಕಳಿಸಬೇಕೆಂದು ಕೇಳಿರುವನು. ಇದು ಹಿಟ್ಲರ್ ಕಡೆಯವರಿಗೆ ಆಶ್ಚರ್ಯವನ್ನುಂಟು ಮಾಡಿರುವುದು.

ಮಧುರೆಯಲ್ಲಿ ಒಬ್ಬ ಕೂಲಿಯವಶ ಹತ್ತಿರವಿದ್ದ 1000 ಮಾರ್ಕ್ ಜರ್ಮನ್ ನೋಟುಗಳನ್ನು ಪೋಲೀಸಿನವರು ವಶಪಡಿಸಿಕೊಂಡರು. ಈ ನೋಟುಗಳು ಒಂದು ವಾರದ ಕೆಳಗೆ ಮಾರ್ಕೆಟ್ಟಿನಲ್ಲಿ ಕೂಲಿಯವನಿಗೆ ಸಿಕ್ಕಿತು.

ಇವ್ವಲಿಗೋಸ್ಕರ ಹೊಣೆಯ ಮುರವನ್ನು ಮದರಾಸು ಆಫೀಸತ್ಯನಲ್ಲಿಯಾರೂ ಕಡಿಯಿಬಾರದೆಂದು ಸರ್ಕಾರಿ ಆಜ್ಞೆಯಾಗಿದೆ.

ಟ್ಯುನಿಷಿಯಾದಲ್ಲಿ ಜರ್ಮನ್ ದಳಪತಿಯಾದ ಫಾನ್ ಆರ್ನಿಕನ್ನು ಸೆರೆಹಿಡಿದವರು ಭಾರತದ 4 ನೇ ಸೇನೆಯವರು.

ಟ್ಯುನಿಷಿಯಾ ಮುತ್ತಿಗೆ ಮುಗಿಯಿತು. ಟ್ಯುನಿಷಿಯಾಕ್ಕೂ ಸಿಸಲಿಗೂ ನಡುವೆ ಇರುವ ಇಟಲಿಯವರ ಪ್ಯಾಂಟ್ ಲೇರಿಯಾ ದ್ವೀಪದ ಮೇಲೆ ಮಿತ್ರ ವಿಮಾನ ಧಾಳಿ ಪ್ರಾರಂಭವಾಗಿದೆ

ಉತ್ತರ ಆಫ್ರಿಕಾವು ತನ್ನ ಕೈ ತಪ್ಪಲು ಇಟಲಿಯವರು ಫ್ರೆಂಚರಿಪೆ ಸೇರಿದ ಕಮಾಯಿಯ ಎರಡು ಭಾಗವನ್ನು ಆಕ್ರಮಿಸಿಕೊಂಡಿರುವರು.

ನಾರ್ವೆಯಲ್ಲಿ ಜಪಾನರ ಎರಡು ಲಕ್ಷ ಸೇನೆಗಳಿರುವವು.

ಹಿಂದೂಸ್ಥಾನದವರು ವರ್ಷಂಪ್ರತಿ 01 ಕೋಟಿ ಗಜ ಬಟ್ಟೆಯನ್ನು ಉಪಯೋಗಿಸುವರು. ಈ ಬಟ್ಟೆಯಿಂದ ಪ್ರಪಂಚವನ್ನು 140 ಸಲ ಸುತ್ತಿಸಿಕಬಹುದು !

ಇಂಡಿಯಾ ಒಂದು ಜನಾಂಗವೇ ?

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಈಗ ನಾವು ಯೋಚಿಸಬೇಕಾದದ್ದು ಹಿಂದೂಸ್ಥಾನದವರು ಒಂದು ಜನಾಂಗವೇ ? ಒಂದು ಜನಾಂಗವಾಗಲು ಭಾಷೆ ಆಹಾರ ಉಡಿಗೆ ಎಲ್ಲಾ ಒಂದೇ ತರಹ ಇರಬೇಕು. ಜಾತಿ ವಿಷಯದಲ್ಲಿ ಮೊದಲೇ ಹೇಳಿದೆ. ಒಂದು ಜನಾಂಗಕ್ಕೆ ಆಹಾರ, ಉಡಿಗೆ, ಮತ, ಭಾಷೆ ಇವೆಲ್ಲ ಒಂದೇ ತರಹವಾಗಿರಬೇಕೆಂಬುದನ್ನು ಅನೇಕರು ಹೇಳಬಹುದು. ಇದರಿಂದ ಜನಾಂಗವಾಗುವುದಿಲ್ಲ. ಮೂರನೇ ದಳಕ್ಕೆ ಇದೇ ಬೇಕಾದದ್ದು ಎನ್ನಬಹುದು.

ಹಿಂದೂಸ್ಥಾನದೊಡ್ಡ ದೇಶ. ಒಂದೊಂದು ಭಾಗದಲ್ಲಿ ಒಂದೊಂದು ತರಹ ದವಸಗಳು ಬೆಳೆಯುತ್ತದೆ. ಋತುಗಳು ಸಹ ಒದಲಾವಣೆಯಿರುತ್ತೆ. ಬೆಲ್ಜಿಯಂ ಸ್ವಿಜರ್‌ಲೆಂಡಿನ ಹಾಗೆ ಸಣ್ಣವುಟ್ಟ ರಾಜ್ಯಗಳನ್ನು ಈ ವಿಶಾಲ ದೊಡ್ಡದಾದ ಹಿಂದೂಸ್ಥಾನಕ್ಕೆ ಸಾಟಿ ಮಾಡುವುದಕ್ಕೆ ಆಗುತ್ತದೆಯೇ ? ಬ್ರಿಟಿಷರು ಬೇಸಿಗೆಯಲ್ಲಿ ಬ್ರಿಟನ್ನಿನಲ್ಲಿ ಉಪಯೋಗಿಸುವ ಒಟ್ಟಿಗಳನ್ನು ಸದಾ ಕಾಲದಲ್ಲಿಯೂ ಉಪಯೋಗಿಸುತ್ತಾರೆಯೇ ? ನಮ್ಮಲ್ಲಿ ಬೇಸಿಗೆಯಲ್ಲಿ ಉಪಯೋಗಿಸುವ ಒಟ್ಟಿಯನ್ನು ಛಳಿಗಾಲದಲ್ಲಿ ಉಪಯೋಗಿಸಲು ಆಗುತ್ತದೆಯೆ ? ಇದರಿಂದ ನಾವು ಬೇರೆ ಬೇರೆ ಜನಾಂಗವೆಂದು ಹೇಳುವುದಕ್ಕೆ ಆಗುತ್ತದೆಯೆ ? ಎಂದಿಗೂ ಇಲ್ಲ. ಬ್ರಿಟಿಷರೂ ಒರ್ಮನಿಯರೂ ಇವರ ಉಡಿಗೆ ತೊಡಿಗೆ, ಆಹಾರ ತೆಗೆದುಕೊಳ್ಳಿ. ಇವರಿಬ್ಬರೂ ಒಂದೇ ತರಹ ಊಟಮಾಡುವರು. ಒಂದೇ ತರಹ ಉಡಿಗೆ ಉಡುವರು. ಈ ಎರಡು ಜನಾಂಗ ಒಂದೋ ? ಇದರಿಂದ ಒಂದೇ ತರಹ ಊಟ, ಒಳ್ಳೆದೇ ತರಹ ಉಡಿಗೆ ಇವಿಂದ ಜನಾಂಗ ಒಂದನ್ನಾಗಿ ಮಾಡಲು ಆಗುವುದೇ ಇಲ್ಲ.

ಮುಂದೆ ಮುಂದೆ ಹೋಗುತ್ತಾ ನೋಡಿ. ಜಾತಿ, ಭಾಷೆ, ಅಮೇರಿಕಾ ಸಂಯುಕ್ತ ರಾಷ್ಟ್ರ ನೋಡಿ ಇದು ದೊಡ್ಡ ರಾಜ್ಯ ಡೆಮೆಕ್ರಾಟಿಕ್ ರಾಜ್ಯವೆಂದು ಪ್ರಸಿದ್ಧಿ ಇಲ್ಲಿ ಯೂರೋಪಿನಲ್ಲಿರುವ ಎಲ್ಲಾ ಜನಾಂಗದವರೂ ಇಂಗ್ಲಿಷರೂ, ಐರಿಷ್, ಫ್ರೆಂಚ್, ಜರ್ಮನರೂ ತುಂಬಿರುತ್ತಾರೆ. ಇಲ್ಲಿ ಹಿಂದೂಸ್ಥಾನದವರು ಹಾಗೆ ಬೇರೆಬೇರೆ ಜನಾಂಗವಾಗಲಭೆಯಿಲ್ಲ. ದಕ್ಷಿಣ ಆಫ್ರಿಕಾವಸಿಗೋ ಜನರು ಸಹಾ ಇಲ್ಲಿ ಇರುವರು. ಪಶ್ಚಿಮ ಅಮೇರಿಕಾದಲ್ಲಿ ಜಪಾನರು ಹೇರಳವಾಗಿರುತ್ತಾರೆ. ಅವರು ಅಮೇರಿಕಾ ಜನರಾಗಿರುವುದು ಕೆನಡಾದಲ್ಲಿ ಇಂಗ್ಲೀಷರೂ ಫ್ರೆಂಚರೂ ವಾಸಮಾಡುವರು. ದಕ್ಷಿಣಾ ಆಫ್ರಿಕಾದಲ್ಲಿ ಇಂಗ್ಲೀಷರೂ ಡಚ್ಚರೂ ನೆಲಸಿರುವರು. ಆಸ್ಟ್ರೇರಿಕಾ, ಕೆನಡ, ದಕ್ಷಿಣಾ ಆಫ್ರಿಕಾಗಳಲ್ಲಿ ಇಲ್ಲಿನ ಹಾಗೆ ಗೊಂದಲ ಮಾಡಿಕೊಂಡಿರುವರೆ ? ನಾವೆಲ್ಲರೂ ಒಂದೇ ಜನಾಂಗ ಪಶ್ಚಿಮಾತ್ಯರು ಹೇಳುವ ಹಾಗೆ ನಾವೆಲ್ಲರೂ 3 ಭಾಗವಾಗಿ ಅಂದರೆ ಉತ್ತರದಲ್ಲಿ ಆರ್ಯರೂ, ಆಗ್ನೇಯಲ್ಲಿ ಮಾಂಗೋಲಿಯನ್ನರೂ, ದಕ್ಷಿಣದಲ್ಲಿ ದ್ರಾವಿಡರೂ ಇರುವರೆಂದು ಇಟ್ಟುಕೊಂಡರೂ ಹಿಂದೂಸ್ಥಾನವೆಲ್ಲಾ ಒಂದೇ ಒಂದು ಜನಾಂಗವೆಂದು ಯಾತಕ್ಕೆ ಕರೆಯಿಕೊಡದು. ಹಿಂದೂಸ್ಥಾನದ ಭಾಷೆಗಳ ಕಡೆ ಗಮನ ಕೊಡೋಣ.

ಬ್ರಿಟನ್ ಯೂರೋಪಿನ ಪಶ್ಚಿಮ ಭಾಗದಲ್ಲಿ ಒಂದು ಸಣ್ಣ ದ್ವೀಪ ಅಲ್ಲಿ ಇಂಗ್ಲೀಷ್, ವೆಲಿಷ್, ಸ್ಕಾಚ್ ಎಂಬ ಮೂರು ಭಾಷೆಗಳನ್ನಾಡುತ್ತಾರೆ. ಇಂಗ್ಲೆಂಡಿಗೆ ಖರಿವ ವಿಸ್ತೀರ್ಣವೆಷ್ಟು ? ಹಿಂದುಸ್ಥಾನದ ವಿಸ್ತೀರ್ಣವೆಷ್ಟು ? ಇಂಗ್ಲೆಂಡಿಗೆ 3 ಭಾಷೆಯಾದರೆ ಇಂಗ್ಲೆಂಡಿಗಿಂತ 40 ರಷ್ಟು ಹೆಚ್ಚು ವಿಸ್ತೀರ್ಣಗಳ ಹಿಂದೂಸ್ಥಾನಕ್ಕೆ 90 ಭಾಷೆಗಳಾದರೂ ಬೇಡವೆ ? ರಷ್ಯಾದಲ್ಲಿ 100 ಭಾಷೆಗಳನ್ನು ಆಡುತ್ತಾರೆ. ಹಿಂದೂಸ್ಥಾನದಲ್ಲಿ ಸಿಂಧಿ, ಪಂಜಾಬಿ, ಹಿಂದಿ, ಉರ್ದು, ಬೆಂಗಾಲಿ ಉರಿಯ, ಮರಾತಿ ಗುಜರಾತಿ, ತೆಲಗು, ತಮಿಳು, ಕನ್ನಡ ಮಲೆಯಾಳ ಈ ಹನ್ನೆರಡು ಭಾಷೆಗಳನ್ನು ಮಾತ್ರ ಮಾತನಾಡುತ್ತಿರುತ್ತಾರೆ. ಇವು ಈ ದೇಶಕ್ಕೆ ಹೆಚ್ಚೇ ? ನಾವು ನಾನಾ ಭಾಷೆಯಾಡುತ್ತೇವೆಂದೂ ಒಂದು ಜನಾಂಗವಲ್ಲವೆನ್ನಬಹುದೆ ? ಜಾತಿ, ಮತ, ಭಾಷೆ, ಊಟ ಇವೇ ಒಂದು ಜನಾಂಗವ ಗುರ್ತಲ್ಲ ಜನಾಂಗ ಎಂದರೆ ಒಂದೇ ಉದ್ದೇಶದಿಂದ ಕೆಲಸ ಮಾಡುವುದು, ಒಂದೇ ಸಮನಾಗಿರುವುದು, ಇದು ನನ್ನ ದೇಶ ಎನ್ನುವುದಲ್ಲದೆ ನನ್ನ ಕೆಲಸ ತೀರಿದ ಮೇಲೆ ಈ ದೇಶ ಬಿಟ್ಟು ಹೋಗುತ್ತೇ ಸಂಬದಿರುವುದು, ರಾಜಕೀಯ ಸಂಸ್ಥೆಗಳಲ್ಲಿ ಎಲ್ಲರೂ ಭಾಗವಹಿಸುವುದು, ಒಂದೇ ಗವರ್ನರ್ ಹೊಡೆದಾಡುವುದು, ರಾಜಕೀಯ ಸಂಸ್ಥೆಗಳಲ್ಲಿ ಎಲ್ಲರಿಗೂ ಸಮಭಾಗವಿರುವುದು.

ಇದೇ ರೀತಿಯಲ್ಲಿ ಹಿಂದೂಸ್ಥಾನದವ ಹಕ್ಕಿರಬೇಕು. ಇದೇ ಜನಾಂಗ ಅಲ್ಲದೆ ರಿಗೆ ಇನ್ನೇನು ಹೇಳಿದರೂ ಅದು ಒಪ್ಪು, ಸತ್ಯವಲ್ಲ. ಹೊಟ್ಟೆಕಿ ನೂರು ವುದು ಎಂದಾಗುವ

ನಾಯಿಯೂ ಸೈನ್ಯಕ್ಕೆ

ಒಬ್ಬನನ್ನು 3 ಅಥವ 4 ಆಳುತ್ತಿ ಕಚ್ಚಿದ ನಾಯಿಯನ್ನು ಅಮೇರಿಕಾ ಸರ ಕಾರದವರು "ದೇಶರಕ್ಷಣೆ" ಗೋ ಸ್ಕರ ಒಂದು ನಾಯಿಯ ಸೈನ್ಯವನ್ನೇರ್ಪ ಡಿಸಿರುವರು. ಈಗಾಗಲೇ ಒಂದೂ ಕಾಲು ಲಕ್ಷ ನಾಯಿಗಳ ಸೈನ್ಯವಿದೆ.

ಕೋರ್ಟಿನ ಸಮನ್ ಬಿಸಾಡಿದನು

ಈಗ ಆಂಗ್ಲೇಯ ಪತ್ರಿಕಾಕಾರನಾದ ಸಿ|| ಜಿವೆರ್ಲ್ಲಸಿಕಲಾಸ್ ಮುಂಬಯಿನಲ್ಲಿರುವನು. ಇವನಿಗೆ ಟಾಜ್‌ಮಹಲ್ ಹೋಟಲ್‌ನಲ್ಲಿ ಒಂದು ಮಿಲಿಟರಿ ಸಮನ್ ಒಂಕು ಅದು ಈ ರೀತಿ ಇದೆ ಎಂದು ಓದಿ ಜೂರುಜೂರು ಮಾಡಿ ಕಸದ ಬುಟ್ಟಿಗೆ ಎಸೆದನು.

ರಬ್ಬರ್ ನೌಕೆ

ಈಗ ಜಪಾನ್ನಿಗೆ ಸೇರಿದ ಪೂರ್ವ ದ್ವೀಪಸ್ತೋಮಗಳಲ್ಲಿ ಹೇರಳವಾಗಿ ರಬ್ಬರ್ ಸಿಗುವುದಷ್ಟೆ ? ಅಲ್ಲಿಂದ ರಬ್ಬರ್ ನೌಕೆಗಳ ತಯಾರು ಮಾಡಿ ಸಾಮಾನುಗಳನ್ನು ಭರ್ತಿಮಾಡಿಕೊಂಡು ಜಪಾನಿಗೆ ಸಾಗಿಸಿ, ಅಲ್ಲಿ ಆ ನೌಕೆಯನ್ನು ಜೂರು ಜೂರು ಮಾಡಿ ಈ ರಬ್ಬರನ್ನು ಇತರ ಕೆಲಸಗಳಿಗೆ ಯಾತಕ್ಕೆ ಉಪಯೋಗಿಸ ಬಾರದೆಂದು ಯೋಚಿಸುತ್ತಿರುವೆವು.

ಮುಂದಿ ವೈಸರಾಯರ್ಯಾರು

ಭಾರತದ ಮುಂದಿನ ವೈಸರಾಯಿ ಪಟ್ಟ ಯಾತಕ್ಕೆ ಡ್ಯೂಕ್ ಆಫ್ ಎಂಡ್ ಸರವರಿಗೆ ಕೊಡಬಾರದೆಂದು ಮುಂಬಯಿ ಕ್ರಾನಿಕಲ್ ಕೇಳುತ್ತದೆ.

ನಾವೆಗಳನ್ನು ಕಟ್ಟುವ ರೀತಿ

ಅಮೇರಿಕಾದಲ್ಲಿ ಈಗ ಎಷ್ಟುಬೇಗನೆ ಜಹಜುಗಳನ್ನು ಕಟ್ಟುವುದೆಂಬುದನ್ನು ಫಲಂ ರೂಪದಲ್ಲಿ ತಯಾರುಮಾಡಿ ಇಂಗ್ಲೆಂಡಿಗೆ ಕಳಿಸ್ತಿರುತ್ತಾರೆ. ಈ ಫಿಲಂನ್ನು ನೋಡಿ ಇಂಗ್ಲೆಂಡಿನಲ್ಲಿ ಇನ್ನುಮೇಲೆ ಹಡಗುಗಳನ್ನು ಬೇಗಬೇಗನೆ ಕಟ್ಟಲು ಅನುಕೂಲವಾಯಿತು.

ಜನರಲ್ ಜೀರೋ, ಜನರಲ್ ಬರ್ಜೆರೆಟ್ ರವರ ಹೆಂಡತಿಯರನ್ನು ಜರ್ಮನರು ದಸ್ತಗಿರಿ ಮಾಡಿರುವರು.

ಬ್ರಿಟನ್ನು ಶಾಂತಿ ಸಮಯದಲ್ಲಿ ವರ್ಷಂಪ್ರತಿ 450 ಮಿಲಿಯ ಕ್ವಾಶದ ಬ್ಲೇಡನ್ನು ಉಪಯೋಗಿಸುತ್ತಿತ್ತು. ಈಗ 112 ಮಿಲಿಯಗಳನ್ನು ಮಾತ್ರ ಉಪಯೋಗಿಸಬೇಕಾಗಿ ಬಂದಿದೆ.

ಬರ್ಮಾರಂಗದಲ್ಲಿ ಕಚಿನ್ ಜಾತಿಯ ಸೈನಿಕರು ಜನರಾನು ಸೈನಿಕರಷ್ಟೇ ಬಲಶಾಲಿಗಳಾಗಿರುವರು.

ದೇಶಾಭಿಮಾನ ಸ್ವಾಭಿಮಾನ

ಇವುಗಳಿಂದ ದೃಷ್ಟಿಯಿಂದಲೂ ಮೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯ

ಪ್ರಜೆಗಳ ಶಾಖೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಸೊಬಲಗಿಗೆ ಸರ್ಕಾರದ ಹಣ್ಣುವಳಿಯೇ ಆಧಾರ

ವಿಮೆಯಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪಾವತಿಮಾಡಲಾಗುವದು.

ವಿಮೆದಾರರಿಗೆ ಆಡಳಿತ ಸಮಯದಲ್ಲಿ ಪ್ರತಿನಿಧ್ಯವುಂಟು

ಸಾವಿರಕ್ಕೆ ಸಾಲಿಯಾನಾ ಇಪ್ಪತ್ತು ರೂ. ಗಳಂತೆ ಬೋನಸ್ ಹಂಚಿದೆ

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,

ಮೈಸೂರು ಸರ್ಕಾರದ ಜೀವವಿಮೆ ಇಲಾಖೆ

ಬೆಂಗಳೂರು.

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು

T G. ಮಾರ್ಕಿನ ಹಿಂಗನ್ನು

ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

ಮೈಸೂರು ವೈಶ್ಯ ಪತ್ರಿಕೆ

ಉತ್ತಮ ಸಚಿತ್ರ ಕನ್ನಡ ವಾರ್ತಾ

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ಈಗಿನ ವಾರ್ಷಿಕ ಚಂದಾ ರೂ. 3—0—0

ಬಿಡಿ ಪ್ರತಿ 4 ಆಣೆ.

ಹಿಂಬಾಧನ್ಸ್ ರೈಲ್ವೆ ಬುಕ್‌ಸ್ಟಾಲ್

ನಲ್ಲಯೂ ಪತ್ರಿಕೆಯು ತೆಗೆಯುತ್ತೆ.

ಕಾರ್ಯಾಲಯ;

ಶ್ರೀ ವಾಸವಾಂಬ ಭವನ

ಅಶೋಕ ರಸ್ತೆ — ಮೈಸೂರು

ಪಿ. ಮಂಜಪ್ಪ ಮಾಲೀಕರು

ಹಳೇ ಅಗ್ರಹಾರ, ಮೈಸೂರು

ರವರಲ್ಲಿ 'ಸತ್ಯವಾದಿ' ಪಡೆಯಬಹುದು.

For good printing

Saraswati Printing Press

Lansdowne Buildings, Mysore

Lakshminarasimha Press

Srirampet, Mysore

ಭಂಗಾರ ಬೆಳ್ಳಿ ಧಾರಣೆ

ಸವರನ್	ರೂ.	65—12—0
ಬಂಗಾರ ತೊಲ	ರೂ.	92—8—0
ಬೆಳ್ಳಿ ,,		1—6—0

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಅಚ್ಚಿನಲ್ಲಿದೆ! ಎದುರುನೋಡಿ!

ಚಿತ್ರಪತ್ರಿಕಾಪ್ರಪಂಚದಲ್ಲಿ

ನೂತನ ಸಾಹಸ

ಚಿತ್ರಪಟ

(ಸಚಿತ್ರ)

(ಅದರ ವ್ಯಕ್ತಿಗಳ ಜೀವನ ಪರಿಚಯ)

ಭಾರತದ ಚಲನಚಿತ್ರ ಪ್ರಪಂಚದ—

ದಿಗ್ದರ್ಶಕರು,

ನಿರ್ಮಾಪಕರು

ನಟರು

ನಟಿಯರುಗಳ

ಸಂಪೂರ್ಣ ಜೀವನ ಚರಿತ್ರೆ

ಅವರು ಈ ಸಿನಿಮಾ ಪ್ರಪಂಚಕ್ಕೆ ಕಾಲಿಡುವ ಮೊದಲು ಹೇಗಿದ್ದರು?

ಇವೇ ಮೊದಲಾದ ಸಂಗತಿಗಳಿರುವ

೧೦೦ ಪುಟಗಳಿಗೆ

ಮಿಗಿಲಾಗಿ

ಸುಂದರ ತ್ರಿವರ್ಣ ಹೊದಿಕೆ

ಯೊಂದಿಗೆ ಹೊರಬೀಳಲಿದೆ

— ನಿಮ್ಮ ಪ್ರತಿಯನ್ನು ಕಾದಿಡಿ —

ಸಂಪಾದಕರು ಮತ್ತು ಪ್ರಕಾಶಕರು—

ಎಸ್. ವಿ. ಕೃಷ್ಣಸ್ವಾಮಿ

360 ಡಿ. ಸುಬ್ಬಯ್ಯ ರೋಡು ಮೈಸೂರು

ಡಾ॥ ಮೆರ್ಲ ಮತ್ತು ಯುದ್ಧ

ಮುಂದಿನತಿಂಗಳಲ್ಲಿ ದಕ್ಷಿಣ ಆಫ್ರಿಕಾದಲ್ಲಿನಡೆಯುವ ಎಲೆಕ್ಷನ್‌ನಲ್ಲಿ ಡಾ॥ ಮೆರ್ಲ ಈರೀತಿ ಪ್ರಕಟಣೆಮಾಡಿರುವರು. ನಮ್ಮ ಪಾರ್ಟಿಗೆ ಎಲೆಕ್ಷನ್‌ನಲ್ಲಿ ಜಯವಾಗಿಬಂದರೆ ನಾವು ಯುದ್ಧದಲ್ಲಿ ಭಾಗವಹಿಸುವುದಿಲ್ಲ. ನಮ್ಮಸೇನೆಗಳನ್ನು ವಾಪಸುಕರೆಸಿಕೊಳ್ಳುತ್ತೇವೆ ಆದುನಮ್ಮ ರಾಜ್ಯವನ್ನು ಕಾಪಾಡಿಕೊಳ್ಳಲಿಕ್ಕೆ ಎಂದುಹೇಳಿ ಜನವ್ ಸಮ್ಟ್ಸ್‌ರವರು ದಕ್ಷಿಣ ಆಫ್ರಿಕಾದವರನ್ನು ಯುದ್ಧಗ್ರಸ್ಥರನ್ನಾಗಿ ಮಾಡಿರುತ್ತಾರೆ. ಅಲ್ಲದೆ ಆಫ್ರಿಕಾದಿಂದ ಆಕ್ಸಿಸ್ ಪಲಾಯನವಾದದ್ದನ್ನು ನೋಡಿ ಸಮಯ ಕಾದಿರುವೆನು ಎಂದರು.

——

ಅಮೇರಿಕನ್ ವಿಮಾನ ಪಡೆಗಳ ಜಾಂಬ್ ಹೊಡತದಿಂದಲೂ, ನೌಕೆಗಳ ಗುಂಡಿನೇಟಿನಿಂದಲು ಜಪಾನಿ ಸೇನೆಗಳು ಬೋನಿನಲ್ಲಿ ಸಿಕ್ಕಿದ ಮೃಗದ ಹಾಗಿದ್ದಾರೆ.

?

SEE

Next Week

ಗಾಂಧೀಜಿ ವಿಷಯದಲ್ಲಿ

ನವನಗರದ ಜಾಂ ಸಾಹೇಬರ ಹೇಳಿಕೆ

ನವನಗರದ ಮುಕಾರಾಜರಾದ ಜಾಂ ಸಾಹೇಬರು ಲಂಡನ್ನಿನಲ್ಲಿ ಒಬ್ಬ ಪೃತ್ರಪತ್ರಿಕಾಕರ್ತರಿಗೆ ಹೀಗೆ ಹೇಳಿದರು.—

ಕಾಂಗ್ರೆಸ್ ಗಾಂಧೀಜಿ ಕೈಲಿದೆ ಅವರು ಬಯಸುವವರೆಗೆ ಅವರನ್ನು ಬಿಡುವವರು ಯಾರೂ ಇಲ್ಲ. ಅಗಾಗ್ಗೆ ಅವರು ವಿಶ್ರಾಂತಿ ತೆಗೆದುಕೊಳ್ಳುವರು. ಅದು ಹೆಚ್ಚು ಕಾಲವಲ್ಲ. ಕಾಂಗ್ರೆಸ್ಸಿನವರು ಏನು ಮಾಡಬೇಕಾದರೂ ಇವರ ಸಲಹೆಯನ್ನು ತೆಗೆದುಕೊಳ್ಳುವರು. ಇವರ ಸಂಗಡ ಇರುವವರಲ್ಲಿ ಐಕ್ಯಮತ್ಯವಿಲ್ಲ. ಇವರು ಸತ್ತರೆ ಕಾಂಗ್ರೆಸ್ ಮೂರು ಭಾಗವಾಗುವುದು.— ನೆಹ್ರೂರವರ ಪಾರ್ಟಿ ಒಂದು. ಎರಡನೇದು ವಲ್ಲಭಭಾಯಿ ಪಟೇಲರ ಪಾರ್ಟಿ, ಮೂರನೇದು ಶ್ರೀ ರಾಜಗೋಪಾಲಾಚಾರ್ಯರ ಪಾರ್ಟಿ. ಭಾರತದವರ ಮನಸ್ಸು ಯಾವ ರೀತಿ ಇದೆ ಎನ್ನುವುದು ಗಾಂಧೀಜಿ ವಿನಃ ಪ್ರಪಂಚದಲ್ಲಿ ಮತ್ಯಾರಿಗೂ ತಿಳಿಯದು. ನಾವು ವಿಜಾತಿಯ ಜನರು, ನಮ್ಮನ್ನು ಯಾರಾದರೂ ಯಾಚಿಸಿದರೆ ನಾವು ಏನೂ ಸಹಾಯ ಮಾಡುವುದಿಲ್ಲ, ಆದರೆ ಒಬ್ಬ ಸನ್ಯಾಸಿಯು ಯಾಚಿಸಿದರೆ ನಮ್ಮ ಐಶ್ವರ್ಯವನ್ನೆಲ್ಲಾ ಕೊಡುತ್ತೇವೆ. ಪ್ರತಿ ಹಳ್ಳಿಯಲ್ಲಿಯೂ ಒಬ್ಬ ಸಾಧು ಇರುತ್ತಾನೆ ; ಬರೀ ಮೈಯಲ್ಲಿ ಕೂಡುತ್ತಾನೆ. ನೈಗೆಲ್ಲಾ ಬೂದಿಯನ್ನು ಬಳಿದುಕೊಂಡಿರುತ್ತಾನೆ.

ಗಾಂಧೀಜಿ ರಾಷ್ಟ್ರದ ಸಾಧು ದೇಹದ ಕಡೆ ಲಕ್ಷ್ಯ ಕೊಡುವುದಿಲ್ಲ. ದಾರಿದ್ರ್ಯವನ್ನು ಅಪೇಕ್ಷಿಸುವರು, ಇವರ ಸ್ನೇಹಿತರೆಲ್ಲಾ ಲಕ್ಷಾಧೀಶ್ವರರು. ಇವರು ರೈಲಿನಲ್ಲಿ 3 ನೇ ತರಗತಿಯಲ್ಲಿ ಪ್ರಯಾಣ ಮಾಡುವರು. ಕೆಲವು ವೇಳೆ 100 ಜನ ಕೂಡುವ 3 ನೇ ತರಗತಿಯ ಗಾಡಿಯನ್ನು ಇವರಿಗೆ ವಿಶೇಷವಾಗಿಡುವರು. ಗಾಂಧೀಜಿಯವರ ರೌಂಡ್ ಟೇಬಲ್ ಕಾನ್ಫರೆನ್ಸಿಗೆ ಹೋದಾಗಲೆಲ್ಲಾ ಅವರು ಕೂಲಿಯವರು ವಾಸಮಾಡುವ ಕೇರಿಯಲ್ಲಿ ವಾಸಮಾಡುವೆಂದು ತಿಳಿದಿತ್ತು. ಇವರು ಬಿಳಿಗ್ಗೆ ಶ್ರೀಮಂತರ ಮನೆಯಲ್ಲಿರುತ್ತಿದ್ದರು.

ಕೆಲವರು ಗಾಂಧೀಜಿಯವರಿಗೆ ಈ ದೊಡ್ಡಸ್ತಿಗೆ ಬರಲು ಬ್ರಿಟಿಷರೇ ಕಾರಣರೆಂದು ಹೇಳುವರು, ನನಗೆ ತಿಳಿಯುವುದಿಲ್ಲ ಅದನ್ನು ವರ್ತಮಾನಪತ್ರಿಕೆಯವರಿಂದಲೇ ಎನ್ನಬಹುದು. ಇವರು ವೈಸರಾಯರನ್ನು ನೋಡಲು ಬಂದಾಗ, ವೈಸರಾಯಿ ಭವನದ ಗವರ್ನರ್ರು ಕ್ಯೂ ಕಟ್ಟಿಕೊಂಡು ನಿಂತುಕೊಂಡಿದ್ದೂ, ವೈಸರಾಯರನ್ನು ನೋಡಲು ಒರುವಾಗಲೂ ಪಂಚೆಯನ್ನುಟ್ಟುಕೊಂಡು ಬರುವುದೂ ಯಾರಿಗೆ ತಾನೆ ಇವರನ್ನು ದೇವರಂತೆ ಪೂಜಿಸಲು ಮನಸ್ಸು ಹಿಂಜರಿಯುವುದು.

ನಾವು ಬ್ರಿಟಿಷ್ ಸರ್ಕಾರಕ್ಕೆ ಹೇಳುವುದು ವೈಸರಾಯರು ಎಗ್ಜಿಕ್ಯೂಟಿವ್ ಕೌನ್ಸಿಲಿನ 12 ಸದಸ್ಯರನ್ನು ಹಿಂದೂಸ್ಥಾನಿಯರಿಗೇನೇ ಕೊಡಿ ಹಣಕಾಸಿನ, ಯುದ್ಧ ಈ ಪದವಿಯ ಸದಸ್ಯತ್ವ ಇವರಿಗೇನೇ ಕೊಡಿ ಮಿಲಿಟರಿ ಹುದ್ದೆಯು ಈಗಿನ ಹಾಗೆ ಕಮಾಂಡರ್-ಇನ್-ಛೀಫ್ ಕೈಲಿರಲಿ. ಇನ್ನು ಮುಂದೆ ಕೌನ್ಸಿಲ್ ಬದಲು ಕ್ಯಾಬಿನೆಟ್ ಎಂದು ಕರೆಯಿರಿ. ಇನ್ನು ಮುಂದೆ ಇಲ್ಲಿನ ಅಡಳಿತದಲ್ಲಿ ಬ್ರಿಟಿಷ್ ಸರ್ಕಾರದವರು ಕೈಹಾಕದಿರಲಿ.

ಅಖಿಲಭಾರತೀಯ ಸವರ್ಕರು ಸನ್ಮಾನ ಮಂಡಲಿ

28—5—43 ಶ್ರೀ ಸವರ್ಕರರ ಜನ್ಮ ದಿನ. ಈ 61 ನೇ ಜನ್ಮದಿನದ ಸಂದರ್ಭದಲ್ಲಿ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ವೀರ ಸವರ್ಕರರನ್ನು ಗೌರವಿಸಲು ಭಾರತೀಯರು ಯೋಚಿಸಿರುವುದು ಒಹಳ ಸಂತೋಷದಾಯಕವಾದ ವಿಷಯವೇ ಸರಿ. ಶ್ರೀ ಸವರ್ಕರರವರು ಒಂದು ಅಸಾಧಾರಣ ವ್ಯಕ್ತಿ. ಈತ ಸಂತಹ ಅಮೂಲ್ಯ ರತ್ನವನ್ನು ಹೆತ್ತು ಪೋಷಿಸಿ ಭಾರತಮಾತೆಯು ಗೌರವಿಸುತ್ತಿದೆ ಈತನ ನಿರುಪಮಾನವಾದ ಬುದ್ಧಿ ಚಾತುರ್ಯ, ವಿಸ್ಮಯಜನಕವಾದ ವ್ಯಕ್ತಿತ್ವ, ಅದಮನೀಯವಾದ ಉತ್ಸಾಹ ಆಶ್ಚರ್ಯಕರವಾದ ಭಾಷಣ ಪಟುತ್ವ, ಹೇತುಯುಕ್ತವಾದ ತರ್ಕ, ಅಂತರ್ಜಾತೀಯ ಯಥಾರ್ಥ ಸ್ಥಿತಿಯನ್ನೂ ಶೀಘ್ರವಾಗಿ ಗ್ರಹಿಸುವ ವೇಧಾಶಕ್ತಿ, ಸರ್ವತೋಮುಖವಾದ ದೇಶಸೇವೆ ಅಕುಲನೀಯವಾದ ಡಂಭಶೂನ್ಯವಾದ ತ್ಯಾಗ, ವಿಜಯಪ್ರವಂತವಾದ ರಾಜನೀತಿ ಇವು ಸರಿಹೋಲಿಸಲಾಗದಂಥವುಗಳು. ಯುವಕರ ಮನೋದೇವತೆಯಾದ ಸವರ್ಕರು, ಹಿಂದೂಮಾತೆಯ ಸುಪುತ್ರರಲ್ಲಿ ಅಗ್ರಗಣ್ಯನು ಈತನು. ನವಯುಗ ಪ್ರವರ್ತಕನು ಹಾಗೂ ರಾಜನೈತಿಕ ಕ್ಷೇತ್ರದಲ್ಲಿ ತ್ರಿಕಾಲದರ್ಶಿಯೂ, ತತ್ವವೇತ್ತನೂ ಈತನು.

ತನ್ನ 7 ನೆಯ ವಯಸ್ಸಿನಲ್ಲಿಯೇ ಕುಲದೇವತೆಯ ಸಮ್ಮುಖದಲ್ಲಿ ಮಾತೃ ಸೇವಾಕಾರ್ಯದಲ್ಲಿ ಆತ್ಮಸಮರ್ಪಣೆಯನ್ನು ಮಾಡುವದಾಗಿ ಶಪಥವನ್ನು ಮಾಡಿ ಅಂದಿನಿಂದ ತನ್ನ ಪ್ರತಿಜ್ಞಾಪೂರ್ತ್ಯರ್ಥವಾಗಿ ಯಾವಶ್ಶಕ್ತಿಯನ್ನು ವಿನಿಯೋಗಿಸುತ್ತಿರುವ ಕರ್ಮವೀರನು ಸವರ್ಕರು. ಸ್ಫೂರ್ತಿದ್ರವವಾದ ಕವಿತೆಗಳ ಮೂಲಕ ನಾಟಕಗಳ ಮೂಲಕ, ಕಲ್ಪನಾ ಕಥೆಗಳ ಮೂಲಕ ಉಪನ್ಯಾಸಗಳ ಮೂಲಕ ತನ್ನ ಬಾಲ್ಯದಿಂದಲೂ ಸ್ವದೇಶೀಯರಲ್ಲಿ ಸ್ವಾತಂತ್ರ್ಯ ಕಾಂಕ್ಷೆಯನ್ನುಂಟು ಮಾಡುತ್ತಿರುವ ಮಹನೀಯನು ಈತನೇ. ಆ ಜನ್ಮ ಕಾರಾಗಾರ ತೀಕ್ಷ್ಣೆಯನ್ನು ಹೊಂದಿದ ತಪಶ್ವಿಯು ಈತನು. ಅಂಡಮಾನು ದ್ವೀಪಗಳಲ್ಲಿದ್ದಾಗ ಶುದ್ಧಿ, ಸಾಕ್ಷರತಾ ಪ್ರಚಾರ, ಅಸ್ಪೃಶ್ಯತಾ ನಿವಾರಣೆಗಳನ್ನೂ ಖೈದಿಗಳಲ್ಲಿ ಜಾರಿಗೆ ತಂದು ಸರ್ಕಾರದ ಉದ್ಯೋಗಿಗಳ ಮನ್ನಣೆಯನ್ನು ಪಡೆದ ಪ್ರಜಾಹಿತೈಷಿಯು ಸವರ್ಕರು. ಈತನ ತಪಸ್ಸೂ ತ್ಯಾಗವೂ ಸ್ತುತ್ಯವಾದವುಗಳು.

ಅಮೇರಿಕಾ ಅಲಾಸ್ಕೆಕ್ಕರಸ್ತೆ

ಅಮೇರಿಕಾದಿಂದ ಅಲಾಸ್ಕಾಕ್ಕೆ 1471 ಮೈಲಿಗಳಿರುವುದು. ಇದು ಬೆಟ್ಟಗುಡ್ಡ ಸೀಮೆ. ಅಮೇರಿಕಾದವರು ಈ ರಸ್ತೆಯನ್ನು ಆರು ತಿಂಗಳು ಅವಧಿಯಲ್ಲಿ ಮುಗಿಸಿದರು. ಇಷ್ಟು ಬೇಗ ಪ್ರಪಂಚದಲ್ಲಿ ಯಾರೂ ರಸ್ತೆಯನ್ನು ಮುಗಿಸಿಲ್ಲವಂತೆ. ಈ ರಸ್ತೆಯ ಅಗಲ 24 ಅಡಿಗಳು. ಇದನ್ನು ರಚಿಸಲು 10000 ಸಿಪಾಯಿಗಳು 2000 ಇತರರೂ ಕೆಲಸಮಾಡಿದರು. ದಿನಕ್ಕೆ ಎಂಟು ಮೈಲಿ ರಸ್ತೆ ತಯಾರಾಯಿತು. ಈ ರಸ್ತೆಯಲ್ಲಿ ಇನ್ನೂರು ನದಿಗಳಿಗೆ ಸೇತುವೆ ಕಟ್ಟಿದರು. ಕೆಲವು ಕಡೆ ರಸ್ತೆಯನ್ನು ಸಮುದ್ರ ಮಟ್ಟಕ್ಕಿಂತ 4212 ಅಡಿ ಎತ್ತರದಲ್ಲಿ ಮಾಡಬೇಕಾಗಿದ್ದಿತು. ಹಿಂದೆ ಅಲಾಸ್ಕಾಕ್ಕೆ ಹಡಗಿನಲ್ಲಾಗಲಿ ಇಲ್ಲವೆ ವಿಮಾನಗಳಲ್ಲಿ ಸರಕುಗಳನ್ನು ಸಾಗಿಸುತ್ತಿದ್ದರು. ಈಗ ಒಂದು ವಾರದೊಳಗಾಗಿ ಎಂಥಾ ಸಮಗ್ರಾಲವಾಗಲಿ ಈ ರಸ್ತೆಯಲ್ಲಿ ಸಾಗಿಸಲು ಅನುಕೂಲವಾಯಿತು. ಇದನ್ನು ರಚಿಸಲು 27 ಕೋಟಿ ರೂಪಾಯಿಗಳು ಖರ್ಚಾಗಿದೆ. ಅಂದರೆ ಹಿಂದು ಯುದ್ಧ ಹಡಗಿನ ಬೆಲೆಗಿಂತ ಕಮ್ಮಿ ಎನ್ನ ಬಹುದು, ಈ ಪ್ರದೇಶದಲ್ಲಿ ವಿಶೇಷವಾಗಿ ದೊರೆಯುವ ಲೋಹಗಳನ್ನೂ ತೊಲೆಗಳನ್ನೂ ಸಾಗಿಸಲು ಬಹಳ ಅನುಕೂಲವಾಯಿತು. ಈ ರಸ್ತೆ ನಿರ್ಮಾಣದಿಂದ ಚೈನಾಕ್ಕೂ ರಷ್ಯಾಕ್ಕೂ ಯುದ್ಧ ಸಾಮಗ್ರಿಗಳನ್ನು ಕಳುಹಿಸಲು ಅನುಕೂಲವಾಯಿತು. ಅಲಾಸ್ಕದಲ್ಲಿ ಪ್ರಜಾಸಂಖ್ಯೆ 7200. ಆದರೂ ಇವರೆಲ್ಲರೂ ಮೀನು ಹಿಡಿಯುವುದು ಗಣಿ ಕೆಲಸ ಮಾಡಿ ಜೀವಿಸುವುದು, ಗಣಿಗಳಿಂದ ಚಿನ್ನವನ್ನು ಸಹ ತೆಗೆಯುವರು. ತೊಲೆಗಳಿಂದ ಮಾಡಿದ ಮಳಿಗೆಯನ್ನಾ ತಯಾರ್ಮಾಡುವರು. ಈ ರಸ್ತೆಯ ಕೆಲ ಭಾಗವು ಕೆನಡಾ ಪ್ರದೇಶ ಹೊಂದಿರುವುದರಿಂದ ಈ ಎರಡು ರಾಜ್ಯವು ಈ ರಸ್ತೆಯ ಉಪಯೋಗವನ್ನು

ಶತೃ ಜನರಲ್

ಟಿನಿಷಿಯಾದಲ್ಲಿ ಜರ್ಮನಿ ಮುಖ್ಯ ಸೇನಾನಾಯಕನಾಗಿದ್ದ ಜನರಲ್ ವಾನ್ ಅರ್ನಾನ್‌ನನ್ನು ಇಂಗ್ಲೆಂಡಿಗೆ ವಿಮಾನದಲ್ಲಿ ತಂದಿರುತ್ತಾರೆ.

ಟ್ಯೂನಿಸ್ ಸುಲ್ತಾನ್

ಜನರಲ್ ಜಿರೋರವರು ರಾಜ್ಯಾಧಿಕಾರದಿಂದ ಓಡಿಸಿದರು. ಇವನು ಜರ್ಮನರಿಗೆ ಟ್ಯುನಿಷಿಯಾದಲ್ಲಿ ಆಶ್ರಯ ಕೊಟ್ಟಿದುದೇ ಕಾರಣ. ಅಲ್ಲದೆ ವಿಷಿಯ ದೊಡ್ಡ ಅಧಿಕಾರಿಗಳನ್ನು ಗಲಿಗೇರಿಸಿದರು. ಟ್ಯೂನಿಸ್ ಬೇ ತನ್ನ 25 ಮಂದಿ ಹೆಂಡರೊಡನೆ ಮಡಗಾಸ್ಕರ ದ್ವೀಪಕ್ಕೆ ರವಾನೆಮಾಡಲ್ಪಟ್ಟನು. ಈತ ತನ ಮಗನನ್ನು ರಾಜನನ್ನಾಗಿ ಮಾಡಿರುತ್ತಾರೆ.

ಇಂಡಿಯಾ ವಿಷಯ

ಹಿಂದೂಸ್ಥಾನದ ವಿಷಯವು ಬ್ರಿಟಿಷ್ಷಿನವರಿಗೆ ಚೆನ್ನಾಗಿ ತಿಳಿಯಲು ಇನ್ನು ಮುಂದೆ ಲಂಡನ್ನಿನಲ್ಲಿ ಉಪನ್ಯಾಸಗಳನ್ನು ಮಾಡುವ ಏರ್ಪಾಡಾಗಿದೆ.

ಯುದ್ಧ ಸಮಾಪ್ತಿ ?

ಈಗಿನ ಯುದ್ಧವು ಬೇಗನೆ ಸಮಾಪ್ತಿಯಾಗುವುದೆಂದು ಮಾಜಿ ನೌಕಗಳ ಅಡ್ಮಿರಲ್ ಲಾರ್ಡ್ ಕಿಯಿಸ್ ಹೇಳುವರು.

ಓಟ್ಲರಿನ ಅಧಿಕಾರ

ಹಿಟ್ಲರಿಗೆ ಕೊಟ್ಟ ಅಧಿಕಾರ 10-5-43 ಕ್ಕೆ ಮುಗಿಯಬೇಕಾಗಿತ್ತು. ಈಗಿನ ಪರಿಸ್ಥಿತಿಯಲ್ಲಿ ಮತ್ತೆ ಈ ಅಧಿಕಾರವು ಹೆಚ್ಚಿಸಿದೆ.

ಇಂಡಿಯಾ ವಿಷಯದಲ್ಲಿ

ಪ್ರಸಿದ್ಧ ಅಮೇರಿಕನ್ ಗ್ರಂಥಕರ್ತನ

ಅಭಿಪ್ರಾಯ

ಅಮೆರಿಕಾದ ಪ್ರಸಿದ್ಧ ಗ್ರಂಥಕರ್ತರಾದ ಎಡ್ಗರ್ ಸ್ನೋರವರು ಅಲ್ಲಿನ ಒಂದು ಮೃತ್ಯುಶಯ್ಯೆಯಲ್ಲಿ ಆಂಗ್ಲೇಯರು ಹಿಂದೂಸ್ಥಾನವನ್ನು ಹಿಂದೂಸ್ಥಾನದವರೂ ಜಪಾನರೂ ಇವೆರಿಬ್ಬರು ಹಿಡಿತದಿಂದ ಉಳಿಸಿಕೊಳ್ಳಲಾರರು ಎಂದು ಹೇಳಿದ್ದರು. ಹಿಂದೂಸ್ಥಾನವು 1939 ರಂದ ಮಿತ್ರಪಕ್ಷದವರಿಗೆ ಯಾವರೀತಿ ಸಹಾಯ ಮಾಡುತ್ತಿದೆಯೆಂಬ ಗೊತ್ತೊಂದಿಲ್ಲ. ಇದು ಅಕ್ಷಿಸ್ ಪಕ್ಷಕ್ಕೆ ಸೇರಿದರೆ ನಮಗೆ ಎಷ್ಟು ನಷ್ಟವೆಂದು ಎಲ್ಲರೂ ತಿಳಿಯಬೇಕು. ಕಾತ್ಸನ್ ಯುದ್ಧದಿಂದ ಎಷ್ಟು ಪ್ರಯೋಜನವೊ ಅಷ್ಟು ಹಿಂದೂಸ್ಥಾನದವರ ಸಹಾಯ ನಮಗೆ ಬೇಕು. ದಕ್ಷಿಣ ಏಷಿಯಾದಲ್ಲಿ ಇಂಡಿಯಾ ಮಾತ್ರ ನಮಗೆ ಉಳಿದಿದೆ. ಇದು ಅಕ್ಷಿಸ್ ಸಂಗಡ ಸೇರಿದರೆ ನಾವು ಜೈನಾಕ್ಕೆ ಸಹಾಯ ಮಾಡಲು ಆಗುವುದಿಲ್ಲ. ಜೈನಾ ಉಳಿದರೂ ಜಪಾನಿಯರನ್ನು ಓಡಿಸಲು ಆಗುವುದಿಲ್ಲ ನನಗೆ ಮಿಡಲ್ ಈಸ್ಟ್‌ನ ಯುದ್ಧದಿಂದ ಸಾಧ್ಯವಾಗಲು ಇಂಡಿಯ ಸಹಾಯ ನನಗೆ ಬೇಕೇಬೇಕು. ದಿನಪತ್ರಿಕೆಗಳು ತಾ॥ ಒಂದರೆ ಅಂತಃಕಲಹವು ಬೆಳೆಯುತ್ತ ಪಂಚಮ ದಳವು ಉದ್ಭವಿಸುವುದು ನಾನು ಇಂಡಿಯಾವನ್ನು ಪೂರ್ತಿ ಸುತ್ತಿರುವೆನು. ಅಲಹಾಬಾದ್ ಕಾಂಗ್ರೆಸ್ಸಿಗೆ ಸಹಾ ಹೋಗಿದ್ದೆ. ಅಲ್ಲಿ ಮುಖಂಡರನ್ನೆಲ್ಲಾ ನೋಡಿ ಅವರ ಸಂಗಡ ಒಹಳ ಹೊತ್ತು ಚರ್ಚೆ ನಡೆಸಿದೆ ಅಲ್ಲಿಂದ ಕಲಕತ್ತ, ದೆಹಲಿ, ಮುಂಬಯಿ ಇನ್ನೂ ಇತರ ನಗರಗಳಲ್ಲಿದ್ದ ಎಲ್ಲಾ ಪ್ರಮುಖರನ್ನು ನೋಡಿದ್ದೆ, ನಾನು ನೋದದವ ಇಲ್ಲ. ಯುದ್ಧಪಿಡಿಸೆಂದರೂ ಯುದ್ಧಬೇಕೆಂಬವರೂ ವಿದ್ಯಾರ್ಥಿಗಳೂ, ಅಕ್ಸಿಸ ಅನುವಾಯಿಗಳಾದ ಶ್ರೀ ಸುಭಾಷ್ ಚಂದ್ರಬೋಸ್‌ರವರೂ, ಜೆನ್ನ ಪಾರ್ಟಿಗೆ ಸೇರಿದ ಮುಸಲ್ಮಾನರನ್ನೂ, ವ್ಯವಸಾಯಗಾರರನ್ನೂ ಕಾರ್ಖಾನೆಯ ಯಜಮಾನರನ್ನೂ ಇವರನ್ನೆಲ್ಲ ನೋಡಿ ಅದರ ಆಶೆಗಳನ್ನು, ತಿಳಿದುಕೊಂಡಿರುವೆನು. ಆದರೂ ಯಾರನ್ನು ನೋಡಬೇಕೋ ಎಲ್ಲಿ ಈ ಸಂಸ್ಥೆಯ ಬೇಗದ ಕೈ ಇದೆಯೋ ಅದು ಪತ್ತೆಯಾಗಲಿಲ್ಲ. ಅದೃಷ್ಟವಸಾತ್ ವೈಸರಾಯರವರು ಗಾಂಧಿಜೀಯವರನ್ನು ನೋಡಿ ಎಂದು ಹೇಳಿದರು. ನಾನು ಇವರನ್ನು ನೋಡಿ 10 ವರ್ಷವಾಗಿತ್ತು.

ಅಲ್ಲದೆ ವೈಸರಾಯರು ಕಾಂಗ್ರೆಸ್ ಅಂದರೆ ಗಾಂಧಿಜೀ, ಇನ್ನು ಅದು ಅಮಮದೇ. ಸಾಯುವ ತನಕ ಕಾಂಗ್ರೆಸ್ಸನ್ನು ನಡೆಸುವವರು ಗಾಂಧಿಜೀ ಎಂದರು ಆದರೂ ವೈಸರಾಯರು ಕಾಂಗ್ರೆಸ್ ಹಿಂದೂಸ್ಥಾನವಲ್ಲವೆಂದರು. ಗಾಂಧಿಜೀ ಹೇಳುವುದು ಹಿಂದೂಸ್ಥಾನ ಸ್ವತಂತ್ರವಾದರೆ ಹಿಂದು ಮುಸಲ್ಮಾನ್ ಪ್ರಶ್ನೆ ತಾನೇ ಬಗೆ ಹರಿಯುವುದೆಂದು ತಿಳಿದಿರುವುದು. ನಾನು ಇಂಗ್ಲೀಷ್‌ಪರನ್ನು ದ್ವೇಷಿಸುವುದಿಲ್ಲ ಎಂದು ಸಹಾ ಗಾಂಧಿಜೀಯವರು ಹೇಳಿದ್ದರು. ಗಾಂಧಿಜೀಯೆಂದರೆ ಹಿಂದೂಸ್ಥಾನದವರಿಗೆ ಪ್ರಾಣ. ಅವರ ಮಾತೇ ವೇದವಾಕ್ಯ. ಹೇಳಿದ ಹಾಗೆ ಕೇಳುತ್ತಾರೆ. ಗಾಂಧಿಜೀಯನ್ನು ಬಂಧನಪಡಿಸಿದರೆ ಅದನ್ನು ಹಿಂದೂಸ್ಥಾನದಲ್ಲಿ ಯಾರೂ ಸಹಿಸಲಾರರು. ಗಾಂಧಿಜೀ, ನೆಹರು ಇವರನ್ನು ದಸ್ತಗಿರಿ ಮಾಡಿದ್ದು ಆಂಗ್ಲೇಯರು ಹಿಂದೂಸ್ಥಾನದಲ್ಲಿ 200 ವರ್ಷ ರಾಜ್ಯಭಾರ ಮಾಡಿದ ಫಲ ಇಪ್ಪತ್ತು ವರ್ಷದಿಂದ ಹಿಂದೂಸ್ಥಾನದವರ ಬೇಡಿಕೆಗಳನ್ನು ಸಲ್ಲಿಸಿದಿರುವುದು ಕೂಡಲೆ ಸ್ವತಂತ್ರ ಕೊಡಬೇಕೆನ್ನುವುದು. ಈಚಿಗೆ ಸರ್ಕಾರದವರು ಅನೇಕರನ್ನು ಜೈಲಿಗೇರಿಸಿದ್ದು ಸಹ ಕಾಂಗ್ರೆಸ್ಸಿನವರಿಗೆ ಅತೃಪ್ತಿಯನ್ನುಂಟು ಮಾಡಿದೆ.

ಇಂಗ್ಲೆಂಡಿನವರಾಗಲೀ ಅಮೇರಿಕಾದವರಾಗಲೀ ಇಂಡಿಯಾದಲ್ಲಿ ಮೊದ ಶಾಶ್ವತ ಕಾಲಿಟ್ಟು ಕೂತಲೇ ಇದೇನು ಗುಲಾಮರಾಜ್ಯವೋ ಎನ್ನಬಹುದು. ನಮ್ಮ (ಅಮೆರಿಕಾ) ಮಂಗಿಂತ ಎಷ್ಟೋ ಪಟ್ಟದಲ್ಲಿ ಇಂಡಿಯಿನ್ನರು ಸ್ವತಂತ್ರ ರಾಗಿರುವರು. ಸ್ವತಂತ್ರ ಚೈನಾದಲ್ಲಿರುವವರಿಗಿಂತ ಹಿಂದೂಸ್ಥಾನದಲ್ಲಿರುವವರು ಹೆಚ್ಚು ಸ್ವತಂತ್ರರು. ತಮ್ಮ ಮನಸ್ಸನ್ನ ಬಚ್ಚಿ ಮಾತನಾಡಬಹುದು. ಗೆಸ್ಟಾಪೋ ಭಯವಿಲ್ಲ. ಯುದ್ಧದಿಂದ ಕಷ್ಟವಾಗಿಲ್ಲ ರೇಷನಿಂಗ್ ಪದ್ಧತಿಯಿಲ್ಲ(?) ಮಿ॥ ಚರ್ಚಿಲರು ಹಿಂದೂಸ್ಥಾನವನ್ನು ಅಟ್ಲಾಂಟಿಕ್ ಚಾರ್ಟರಿನಲ್ಲಿ ಸೇರಿಸದಿರುವದು ಕೊರತೆಯಾಗಿದೆ. ಸೆರ್ ಸ್ಟಾಫರ್ಡ್ ಕ್ರಿಪ್ಸರ ಸಂಧಾನ ವಿಷಯದಲ್ಲಿಯೂ ಅಸಮಾಧಾನ, ಯುದ್ಧ ಮುಗಿದ ನಂತರ ಸ್ವತಂತ್ರ ಕೊಡುವುದರಲ್ಲಿ ನಂಬಿಕೆಯಿಲ್ಲ. ಆಜಾದ್, ನೆಹರು ಇವರುಗಳು ಅಮೇರಿಕಾ ಹಿಂದೂಸ್ಥಾನ ಪ್ರಚಾರದಲ್ಲಿ ಸ್ರವೇತಿಸಿದರೆ ಅನುಕೂಲವಾಗುವುದೆಂದು ಹೇಳಿರುವು ಇದರಿಂದ ಮಿತ್ರಪಕ್ಷದವರಿಗೆ ಸಹಾಯ ಮಾಡಲು ಅನುಕೂಲವಾಗುವುದೆಂದು ಹೇಳಿರುವರು

ನೆಹರು, ಆಜಾದ್, ಗಾಂಧೀಜಿಯವರು ಹೇಳಿದಹಾಗೆ ನಡೆಯಲಿಕ್ಕಿಲ್ಲವು. ನನಗೆ ತಿಳಿದಮಟ್ಟಿಗೆ ಆಂಗ್ಲೇಯರು ಹಿಂದೂಸ್ಥಾನವನ್ನು ದಬ್ಬಾಳಿಕೆಯಲ್ಲಿಟ್ಟು ಕೊಂಡು, ಜಪಾನೀಯರನ್ನು ಎದುರಿಸಲಾರರು. ನನಗೆ ಚೈನಾ ಹೇಗೆ ಸಹಾಯವೋ ಹಾಗೇ ಇಂಡಿಯಾದ ಸಹಾಯವೂ ಅತ್ಯವಶ್ಯಕ. ಇಂಥದನ್ನು ನಾವು ಕಳೆದುಕೊಳ್ಳಬಾರದು. ನಾವು ಪ್ರಪಂಚದ ಒಹು ಭಾಗದಲ್ಲಿರುವ ಜನತಾಂಗಗಳಿಗೆ ಕೊಡಿಸುತ್ತೇವೆನ್ನುವದು ಈ ಹಿಂದೂಸ್ಥಾನಕ್ಕೇತಕ್ಕಿಲ್ಲ ?

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು— ಜಿ. ಆರ್. ರಾಮಯ್ಯನವರು
ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ ಚೌಡಯ್ಯನವರು
ತಯಾರಿಕೆ— ನಾಹುಕಾರ್ ಟಿ ಎಸ್. ಶಿವಬಸವಸ್ವಾಮಿ
ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್.
ಸ್ಟೂಡಿಯೊ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಮುತ್ತೂರು

ಶಕ್ತಿ ಸಾಧನೆಗೆ ಸುಲಭೋಪಾಯವು

ಸುಧಾ

ಸೇವನೆ ಎಂಬುವುದು ನಿಮ್ಮ ಜ್ಞಾಪಕದಲ್ಲಿರಲಿ

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ಪಸ್ಮಸ್ಪರ್ಶನಗಳಲ್ಲಿ ಪಾ॥ಶಸ್ಥ್ಯವನ್ನು ಪಡೆದಿದೆ

ಬೆಲೆ 1 ರೂಪಾಯಿ